# ಹಸ್ತಲಾಘವ ಎಂಬ ಕಲೆ



**ವ್ಯಕ್ತಿಯೋರ್ವನ ಹಸ್ತಲಾಘವ ವಿಧಾನದಲ್ಲಿ ಆ ವ್ಯಕ್ತಿಯ ಆತ್ಮವಿಶ್ವಾಸ, ಮನಸ್ಥಿತಿ ಹಾಗೂ ವೃತ್ತಿಪರತೆ ಬಿಂಬಿತವಾಗುತ್ತದೆ.**

■ **ರಮೇಶ್ ಶೆಟ್ಟಿಗಾರ್ ಟಿ.**

ಆಬಾಲವೃದ್ಧರಾಗಿ ಯಾರನ್ನೇ ಭೇಟಿಯಾದಾಗ ಕೈಕುಲುಕುವುದು ವಿಶ್ವದ ಎಲ್ಲೆಡೆಯಲ್ಲಿ ಒಂದು ಸಂಪ್ರದಾಯವಾಗಿದೆ. ನಾವು ದಿನವೂ ಬಗೆಬಗೆಯಲ್ಲಿ ಹಲವರಿಗೆ ಕೈಕುಲುಕುತ್ತೇವೆ. ಭಾರತೀಯ ಶಿಷ್ಟಾಚಾರದಂತೆ ಎರಡೂ ಕೈಗಳನ್ನು ಜೋಡಿಸಿ ನಮಸ್ಕರಿಸುವುದು ಅತ್ಯಂತ ಗೌರವಪೂರ್ಣವಾಗಿಯೂ ಆರೋಗ್ಯಪೂರ್ಣವಾಗಿಯೂ ಎನ್ನಿಸಿಕೊಂಡಿದೆ. ಆಧುನಿಕ ಯುಗದಲ್ಲಿ ಅದು ಸನಾತನ ಸಂಪ್ರದಾಯದಂತೆ ತೋರುವುದೆಂದು ಬಹುತೇಕರು ಕೈಕುಲುಕು-ವುದಕ್ಕೇ ಮನಸ್ಸು ಮಾಡುತ್ತಾರೆ. ಹಾಗೆಂದು ಹಸ್ತಲಾಘವವೇನು ಆಧುನಿಕ ಆಚರಣೆಯೇನಲ್ಲ. ಪಾಶ್ಚಾತ್ಯರ ಶಿಷ್ಟಾಚಾರದಲ್ಲಿ ಬಹಳ ಹಿಂದಿನಿಂದಲೂ ಜನರು ಪರಿಚಯ ಮಾಡಿಕೊಳ್ಳುವಾಗ, ಶುಭ ಹಾರೈಸುವಾಗ, ಕೈಕುಲುಕು-ವುದು ವಾಡಿಕೆಯಲ್ಲಿದೆ.

ಹಸ್ತಲಾಘವವು ಗೌರವದ ಸಂಕೇತವಾಗಿದ್ದು ಒಂದು ಸ್ನೇಹಹಸ್ತದ ಮೂಲಕ ಹಲವು ವರ್ಷಗಳ ಮನಸ್ತಾಪಗಳನ್ನು ಕ್ಷಣಾರ್ಧದಲ್ಲಿ ಬಗೆಹರಿಸುವ ಶಕ್ತಿಯೂ ಅದಕ್ಕಿದೆ. 'ಹಸ್ತಲಾಘವವೂ ಒಂದು ಕಲೆಯೇ..' ಎಂದು ಕೆಲವರು ಲಘುವಾಗಿ ಹುಬ್ಬೇರಿಸಬಹುದು. ಹೌದು. ಇಂಗ್ಲಿಷ್‌ನಲ್ಲಿರುವ ನಾನ್ನುಡಿ 'ಫಸ್ಟ್ ಇಂಪ್ರೆಷನ್ ಈಸ್ ದಿ ಮೋಸ್ಟ್ ಲಾಸ್ಟಿಂಗ್' ಹೇಳುವಂತೆ, ಒಬ್ಬ ವ್ಯಕ್ತಿ-ಯನ್ನು ಮೊದಲು ಭೇಟಿಯಾದಾಗ ಆತ ನಡೆದುಕೊಳ್ಳುವ ರೀತಿಯಿಂದ ಆತನ ಅಳೆದು ತೂಗಿ ಒಂದು ಅಭಿಪ್ರಾಯಕ್ಕೆ ಬರಬಹುದು. ಅಂಥ ಅಭಿಪ್ರಾಯಕ್ಕೆ ನಾಂದಿಹಾಡುವ ಹಸ್ತಲಾಘವ ಅಥವಾ ಕೈಕುಲುಕುವುದು (ಶೇಕ್ ಹ್ಯಾಂಡ್) ಕೂಡಾ ಒಂದು ವೈಶಿಷ್ಟ್ಯಪೂರ್ಣ ಕಲೆಯಾಗಿದೆ.

ಹಸ್ತಲಾಘವದ ಭಂಗಿಯಲ್ಲಿ ಸಾಕಷ್ಟು ವೈವಿಧ್ಯತೆಗಳಿವೆ. ವ್ಯಕ್ತಿಯೋರ್ವನ ಹಸ್ತಲಾಘವ ವಿಧಾನದಲ್ಲಿ ಆ ವ್ಯಕ್ತಿಯ ಆತ್ಮವಿಶ್ವಾಸ, ಮನಸ್ಥಿತಿ ಹಾಗೂ ವೃತ್ತಿಪರತೆ ಬಿಂಬಿತವಾಗುತ್ತದೆ. ಜೊತೆಗೆ ಹಸ್ತಲಾಘವದ ಭಂಗಿಯು ಸಂದರ್ಭಕ್ಕೆ ಅನುಗುಣವಾಗಿ ಹಾಗೂ ವ್ಯಕ್ತಿಗೆ ಅನುಗುಣವಾಗಿ ಮಾರ್ಪಾಡಾ-ಗುತ್ತದೆ. ಸ್ನೇಹಿತರನ್ನು ಭೇಟಿ ಮಾಡಿದಾಗ, ಅಪರಿಚಿತರಲ್ಲಿ ಕೈಕೊಡುವಾಗ, ಗೌರವಸ್ಥ ವ್ಯಕ್ತಿಗೆ ಕೈನೀಡುವಾಗ ನಮ್ಮ ನಡೆಯಲ್ಲಿ ಬದಲಾವಣೆಯಿರುತ್ತದೆ. ಮಾತ್ರವಲ್ಲ ಕೋಪದಲ್ಲಿ ಮಾಡುವ ಹಸ್ತಲಾಘವವು ಸಂತೋಷದಲ್ಲಿರುವಾಗ ಮಾಡುವುದಕ್ಕಿಂತ ಬಿನ್ನವಾಗಿರುತ್ತದೆ.

ಕೆಲವೊಬ್ಬರ ಹಸ್ತಲಾಘವವೇ ಕಿರಿಕಿರಿಯನ್ನು ಉಂಟುಮಾಡುತ್ತದೆ.